<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.</u>

ಸಿಸಿ ನಂ. 214/2022

<u>ಫಿರ್ಯಾದಿ</u> <u>ಆರೋಪಿ</u>

ಜನತಾ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.ಭಟ್ಕಳ, ವಿರುದ್ಧ ಗೀತಾ ಶಿವಾನಂದ ಆಚಾರಿ

ಶಾಖೆ ಗೋಕರ್ಣ.

<u>ಆರೋಪಿಃ</u>

ಗೀತಾ ಶಿವಾನಂದ ಆಚಾರಿ ,
ಸಾಃ 32 ವರ್ಷ, ವ್ಯಾಪಾರ , ಸಾಃ ಅಡಿಗೋಡ ಪೈಕಿ ಬೈಲಕೇರಿ,
ತಾಃ ಅಂಕೋಲಾ .

<u>– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –</u>

ನೀವು ದಿಃ 04-06-2019 ಮತ್ತು ದಿಃ 26-06-2019 ರಂದು ಫಿರ್ಯಾದುದಾರ ಸಂಸ್ಥೆಯಿಂದ ತಲಾ ರೂ . 50,000/- ಸಾಲವನ್ನು ಪಡೆದಿದ್ದು , ಸದರಿ ಸಾಲವು ಕಟ್ ಬಾಕಿಯಾಗಿರುವುದರಿಂದ ನೀವು ಸದರಿ ಸಾಲದ ತೀರುವಳಿಯ ಸಲುವಾಗಿ ದಿಃ 10-08-2021 ರಂದು ಫಿರ್ಯಾದುದಾರರಿಗೆ ಗೋಕರ್ಣ ಶಾಖೆಯ ಕರ್ನಾಟಕ ಬ್ಯಾಂಕ್ ಲಿ . ಬ್ಯಾಂಕಿನ ಚೆಕ್ ನಂ. 097574 ನ್ನು ರೂ. 1,07,992/- ಕ್ಕೆ ನೀಡಿದ್ದು, ಫಿರ್ಯಾದುದಾರ ಸಂಘದವರು ಸದರಿ ಚೆಕ್ ನ್ನು ನಗದೀಕರಿಸಲು ಅವರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತದಡಿ ಗೋಕರ್ಣ ಶಾಖೆಗೆ ಹಾಜರು ಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಚೆಕ್ ಅಮಾನ್ಯಗೊಂಡು ದಿಃ 13-08-2021 ರಂದು ವಾಪಸ್ಸು ಬಂದಿದ್ದು, ಈ ಕುರಿತು ನಿಮಗೆ ದಿಃ 18-08-2021 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ಮೂಲಕ ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ಹೇಳಿರುವ ಹಣವನ್ನು ವಾಪಸ್ಸು ಕೊಡದೇ ಕಲಂ 138 ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**<u>ಪ್ರಶ್ನೆ – 1 ನಿಮ್ಮ ಮೇಲೆ</u>** ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

<u>ಉತ್ತರ –</u>

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 09-03-2023.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ